(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು:– ಗಾಂಭೀರ್ಯತೆ ಅವರಿಗೇ ಗೊತ್ತಿಲ್ಲ, ನಾವೇನು ಮಾಡುವುದು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಎಲ್ಲಾ ಹಿರಿಯ ಸದಸ್ಯರು ಇದ್ದೀರಿ, ರೂಲ್ ಏನು ಹೇಳುತ್ತದೆಂದು ನಾನು ಹೇಳುತ್ತೇನೆ. ಹಿರಿಯ ಸದಸ್ಯರು ಕೇಳಿ. ನಿಯಮ 191ರಲ್ಲಿ ಹಕ್ಕು ಬಾಧ್ಯತೆ ಪ್ರಶ್ನೆ ಬಗ್ಗೆ ಒಂದು ಸ್ಪಷ್ಟವಾಗಿ ನಾವು ಯಾವ ರೂಲನ್ನು ಫಾಲೋ ಮಾಡಬೇಕು? ಹೇಗೆ ನಿಯಮಾವಳಿಯನ್ನು ಅಳವಡಿಸಬೇಕು ಎಂದು ಇದೆ.

ಶ್ರೀ ಬಸವರಾಜ ರಾಯರೆಡ್ಡಿ:– ಹಕ್ಕುಭಾದ್ಯತೆಯನ್ನು ತಂದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಅಧ್ಯಕ್ಷರ ಅಪ್ಪಣೆ ಪಡೆದು ನಿಂತಿದ್ದೇನೆ.

Sri Basavaraja Raya Reddy:- I am the concerned man. It cannot be a privilege. It doesn't come under privilege. ಇದು ಪ್ರಿವಿಲೇಜ್ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಕ್ಕುಬಾಧ್ಯತೆಯ ಬಗ್ಗೆ ನಿಯಮ 192 ಏನು ಹೇಳುತ್ತದೆ, ತಾವು ಓದಿ ನೋಡಿ. "ಹಕ್ಕುಬಾಧ್ಯತೆ ಪ್ರಶ್ನೆಯ ಸಂಬಂಧದಲ್ಲಿ ಸೂಚನಾ ಪತ್ರ 'ಹಕ್ಕು ಬಾದ್ಯತೆ ವಿಷಯದ ಬಗ್ಗೆ ಚರ್ಚಿಸಲು ಅಪೇಕ್ಷಿಸುವ ಸದಸ್ಯರು, ಪ್ರಶ್ನೆಯನ್ನು ಚರ್ಚಿಸಲು ಉದ್ದೇಶಿಸಿರುವ ದಿನದಂದು ನಡೆಯುವ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸೂಚನಾ ಪತ್ರವನ್ನು ಕೊಡತಕ್ಕದ್ದು, ದಸ್ತಾವೇಜಿನ ಆಧಾರದ ಮೇಲೆ ಪ್ರಶ್ನೆಯನ್ನು ಹಾಕುವುದಿದ್ದರೆ, ಸೂಚನಾ ಪತ್ರದೊಂದಿಗೆ ಸಂಬಂಧಪಟ್ಟ ದಸ್ತಾವೇಜು ಇರತಕ್ಕದು."

ಷರತ್ತುಗಳು:– ಅಂದರೆ ಅಧಿವೇಶನ ಪ್ರಾರಂಭ ಆಗುವ ಮುಂಚೆ ಲಿಖಿತ ಮೂಲಕ ನಿಮಗೆ ಕೊಡಬೇಕು, ಆಮೇಲೆ ನೀವು ಅಲೋ ಮಾಡಬೇಕು. ಈಗ ಅ ಮಧ್ಯದಲ್ಲಿ ಆ ರೀತಿ ಅಲೋ ಮಾಡುವುದಕ್ಕೆ ರೂಲ್ 192ರಲ್ಲಿ ನಾವೇ ಮಾಡಿರುವಂತಹದು ಇದೆ. ಅದನ್ನು ತಾವು ನೋಡಿ ರೂಲಿಂಗ್ ಕೊಡಿ. ನಂತರ ಚರ್ಚೆಗೆ ಅವಕಾಶ ಮಾಡಿಕೊಡಿ. ನಮ್ಮದೇನೂ ಅಭ್ಯಂತರ ಇಲ್ಲ. ತಾವು 192 ನಿಯಮ ನೋಡಿ.

ಶ್ರೀ ಬಸವರಾಜರಾಯರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಚ್ಯುತಿಯನ್ನು ತಂದಿಲ್ಲ. ಹಕ್ಕುಚ್ಯುತಿ ತರುವುದಕ್ಕೆ ಈ ವಿಚಾರದಲ್ಲಿ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇನ್ನಾವುದು ಬರುತ್ತದೆ? ನೀವು ಅರ್ಥ ಮಾತನಾಡುತ್ತಿದ್ದೀರಿ. ಅದನ್ನೇ ವಿಷಯ ಮಾತನಾಡುತ್ತಿದ್ದೀರಿ.

ಅಧ್ಯಕ್ಷರು:– ಎಲ್ಲಾ ಅಡ್ಡ ದಾರಿಯಲ್ಲಿ ಹೋಗುವುದು ಬೇಡ. ಮಾನ್ಯ ಆರಗ ಜ್ಞಾನೇಂದ್ರ ಅವರು ಆ ಪದ ಏನು ಬಳಕೆ ಮಾಡಿದ್ದಾರೆ, ಅದು ಸರಿಯಲ್ಲ ಎಂದು ತಾವು ಹೇಳಿದ್ದೀರಿ, ಅದನ್ನು ಅವರು ವಾಪಸ್ ತೆಗೆದುಕೊಳ್ಳಲಿ. It is in bad taste.